5C.R.P.67

| |
|---|
| Form No.4 (Civil) Deposition Sheets (R.P.No.57) |

<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>
<u>ಎಸ್.ಸಿ. ನಂ. 73/2022</u>

<u>ದಿನಾಂಕ ಃ 20.06.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ</u>.

ಸಿ. ಡಬ್ಲ್ಯೂ: 6 ಪಿ. ಡಬ್ಲ್ಯೂ:7

| | |
|---|---|
| ಸಾಕ್ಷಿದಾರರ ಹೆಸರು | ಸುನಿಲ್ |
| ಗಂಡನ ಹೆಸರು | ದೇವರಸಯ್ಯ |
| ವಯಸ್ಸು | 34 ವರ್ಷ |
| ಉದ್ಯೋಗ | ಖಾಸಗಿ ಉದ್ಯೋಗಿ |
| ವಾಸ | ಬೆಂಗಳೂರು |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

1. ಕಳೆದ 10 ವರ್ಷದಿಂದ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಮೂಲತಃ ವಡ್ಡರಹಳ್ಳಿಯವನಾಗಿರುತ್ತೇನೆ. ವಾರ, 15 ದಿನಗಳಿಗೊಮ್ಮೆ ನಾನು ನಮ್ಮ ಊರಿಗೆ ಬಂದು ಹೋಗುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಅವರು ನಮ್ಮ ಊರಿನವರಾಗಿರುತ್ತಾರೆ. 1 ನೇ ಆರೋಪಿಯು 10-12 ವರುಷಗಳ ಹಿಂದೆ ಮಂದುವೆಯಾಗಿರುತ್ತಾರೆ. ಆತನ ಹೆಂಡತಿ, ಕಿರಗಸೂರು ಊರಿನವರಾಗಿರುತ್ತಾರೆ. ಆಕೆಯ ಹೆಸರು ಮಧು ಆಗಿರುತ್ತದೆ. ಸುಮಾರು 5 ವರುಷಗಳ ಹಿಂದೆ ಆಕೆ, ಆಕೆಯ ಮನೆಯಲ್ಲಿ ನೇಣುಹಾಕಿಕೊಂಡು ತೀರಿಕೊಂಡಿರುತ್ತಾಳೆ.
2. ಸದರಿ ಆರೋಪಿತರ ಮನೆಯಲ್ಲಿ ಆ ಸಮಯದಲ್ಲಿ, ಯಾರು ಯಾರು ವಾಸಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. 2 ನೇ ಆರೋಪಿ, 1 ನೇ ಆರೋಪಿಯ ತಂದೆ. ಆತ, 1 ನೇ ಆರೋಪಿಯೊಂದಿಗೆ ವಾಸಿಸುತ್ತಾನೆ. 1 ನೇ ಆರೋಪಿಯ ಮದುವೆಯಲ್ಲಿ ನಾನು ಭಾಗವಹಿಸಿದ್ದೆನು. ಮಧುರವರ ತವರು ಮನೆಯವರು, ಸದರಿ ಮದುವೆಯಲ್ಲಿ 1 ನೇ ಆರೋಪಿಗೆ ಏನೆಲ್ಲ ನೀಡಿದ್ದರು ಎಂದು ನನಗೆ ಗೊತ್ತಿಲ್ಲ.

3. ಮಧ್ಯಾಹ್ನ 12 ರಿಂದ 1.00 ಗಂಟೆ ಸಮಯದಲ್ಲಿ, ನಾನು ಆರೋಪಿತರ ಮನೆಯ ಬಳಿ ಇರುವ ಅಂಬೇಡ್ಕರ್ ಭವನದ ಬಳಿ ನಿಂತಿದ್ದೆನು.ಆಗ 1ನೇ ಆರೋಪಿಯು ದ್ವಿಚಕ್ರ ವಾಹನದಲ್ಲಿ, ಅವರ ಮನೆ ಕಡೆ ಹೋಗಿರುತ್ತಾರೆ. ಸುಮಾರು 2 ನಿಮಿಷಗಳ ನಂತರ ಪಕ್ಕದ ಮನೆಯವರಾದ ನಟರಾಜು, ಅವರ ಅತ್ತಿಗೆ ಭಾಗ್ಯ ರವರು ಬಾ, ಬಾ ಎಂದು ಕೂಗಿರುತ್ತಾರೆ. ಆಗ ನಾನು ಅಲ್ಲಿಗೆ ಓಡಿ ಹೋಗಿರುತ್ತೇನೆ. ಅಷ್ಟರಲ್ಲಿ 1 ನೇ ಆರೋಪಿಯು, ತನ್ನ ಮನೆಯ ಬಾಗಿಲನ್ನು ಹೊಡೆದು, ಒಳಗಡೆ ಹೋಗಿದ್ದರು. ನಾವು ಒಳ ಹೋಗಿ ನೋಡಿದಾಗ, ಮಧು ನೇಣುಹಾಕಿಕೊಂಡಿದ್ದಳು. ನಂತರ ನಾವು ಆಕೆಯನ್ನು ಕೆಳಗೆ ಇಳಿಸಿರುತ್ತೇವೆ.

4. ನಂತರ ನಾನು ಹಾಗೂ 1 ನೇ ಆರೋಪಿಯು ಮಧುಳನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ವೈದ್ಯರು ಇ ಸಿ ಜಿ ಮಾಡಿಸಿ, ಮಧು ತೀರಿಕೊಂಡಿರುತ್ತಾಳೆ ಎಂದು ಹೇಳಿರುತ್ತಾರೆ.

5. ನಂತರ ಮಧು ರವರ ಸಂಬಂಧಿಕರು ಆಸ್ಪತ್ರೆ ಗೆ ಬಂದಿದ್ದರು , ಅವರು ನನ್ನನ್ನು ವಿಚಾರಿಸಿದರು. ಆಗ ಮಧು ತೀರಿ ಹೋಗಿದ್ದಾರೆಂದು, ವೈದ್ಯರು ಹೇಳಿದರೆಂದು ಅವರಿಗೆ ಹೇಳಿರುತ್ತೇನೆ.

6. ಮಧು ಹಾಗೂ 1 ನೇ ಆರೋಪಿಯ ಸಂಬಂಧ ಹೇಗಿತ್ತು ಎಂದು ನನಗೆ ತಿಳಿದಿಲ್ಲ. ನಾನು ನೋಡಿದಂತೆ, ಅವರ ಸಂಬಂಧ ಚೆನ್ನಾಗಿತ್ತು. ಮಧು, ನೇಣು ಹಾಕಿಕೊಳ್ಳಲು ಏನು ಕಾರಣ ಎಂದು ನನಗೆ ತಿಳಿದಿಲ್ಲ. ಆ ನಂತರವೂ ಸಹ, ಮಧು, ನೇಣು ಹಾಕಿಕೊಳ್ಳಲು ಏನು ಕಾರಣ ಎಂದು ಆಕೆಯ ಸಂಬಂಧಿಕರಿಂದ ಕೇಳಿ ಮಾಹಿತಿ ಪಡೆದುಕೊಂಡಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿದರು. ಆಗ ನಾನು ಸದರಿ ವಿಚಾರಗಳನ್ನು ಹೇಳಿದ್ದೇನೆ. ಅವರು ಸಹಿ ಹಾಕಲು ಹೇಳಿದ್ದರಿಂದ ನಾನು ಸಹಿ ಹಾಕಿದ್ದೇನೆ. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ನಿಪಿ.14 ಎಂದು, ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

7. ಸದರಿ ನಿಪಿ.14 ರಲ್ಲಿ ರುವ ಸಹಿಯನ್ನು, 1 ನೇ ಆರೋಪಿಯ ಮನೆಯ ಬಳಿ ಮಾಡಿರುತ್ತೇನೆ. ಸದರಿ ಮಧುರವರ ಆತ್ಮಹತ್ಯೆಯ 1 ಅಥವಾ 2 ದಿನಗಳ ನಂತರ ಸದರಿ ಸಹಿಯನ್ನು ನಾನು ಮಾಡಿರುತ್ತೇನೆ. ಮಧು ರವರ ಆತ್ಮಹತ್ಯೆಯ ವಿಚಾರದಲ್ಲಿ ವಿಚಾರಣೆ ಮಾಡಲು ಪೊಲೀಸರು ಬಂದಿದ್ದರು. ಸದರಿ ಸಮಯದಲ್ಲಿ ಹಲವಾರು ಜನ ಊರಿನವರು ಸೇರಿದ್ದರು. ಮಧ್ಯಾಹ್ನ 3 ರಿಂದ 4.00 ಗಂಟೆಯಲ್ಲಿ ನಿಪಿ.14 ರಲ್ಲಿರುವ ಸಹಿಯನ್ನು ಮಾಡಿದ್ದೆನು. ಸದರಿ ಸಮಯದಲ್ಲಿ, ಪ್ರಾಸಾ. 6 ರವರು ಸಹಿ ಮಾಡಿದ್ದರು. ಪೊಲೀಸರು ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡ

ಬಗ್ಗೆ ನನಗೆ ಗೊತ್ತಿಲ್ಲ, ಕಾರಣ ನಾನು ಮನೆಯ ಒಳಗೆ ಹೋಗಿಲ್ಲ. ಮು.ಮಾ.1 ರಿಂದ 5 ವಸ್ತುಗಳನ್ನು ನೋಡಿದ್ದೇನೆ, ಅವುಗಳು ಮಧು ರವರು ಧರಿಸಿದ್ದ ಬಟ್ಟೆಗಳಾಗಿರುತ್ತವೆ.

8. ಇಲ್ಲಿ ಹೇಳಿದ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿದ್ದೆನು. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ, ಸದರಿ ಫೋಟೋಗಳನ್ನು, 1 ನೇ ಆರೋಪಿಯ ಮನೆಯ ಒಳಗಡೆ ಹಾಗೂ ಮಧು ಆತ್ಮ ಹತ್ಯೆ ಮಾಡಿಕೊಂಡ ಸ್ಥಳದಲ್ಲಿ ತೆಗೆಯಲಾಗಿದೆ ಎಂದು ಗುರುತಿಸುತ್ತಾರೆ. ಸದರಿ ಎರಡು ಫೋಟೋಗಳನ್ನು ನಿಪಿ.15 ಮತ್ತು 16 ಎಂದು ಗುರುತಿಸಲಾಯಿತು.

9. ಸದರಿ ನಿಪಿ.15 ಮತ್ತು 16 ಫೋಟೋಗಳನ್ನು ಯಾವ ಸಂದರ್ಭದಲ್ಲಿ ತೆಗೆಯಲಾಗಿದೆ ಎಂದರೆ ಗೊತ್ತಿಲ್ಲ. ಮಧು ಆತ್ಮಹತ್ಯೆ ಮಾಡಿಕೊಂಡ ವಿಚಾರದಲ್ಲಿ ಆರೋಪಿತರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಗೊತ್ತು.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

10. ಮಧು ಮತ್ತು 1 ನೇ ಆರೋಪಿಯ ನಡುವೆ ಮದುವೆಯಾಗಿ 4 ವರುಷಗಳ ಕಾಲ ಮಾತ್ರ ಸಂಬಂಧ ಚೆನ್ನಾಗಿತ್ತು ನಂತರ ಅವರ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮಳವಳ್ಳಿ ಆಸ್ಪತ್ರೆಗೆ ಮಧುರವರ ತಂದೆ ಶೇಖರ ಮತ್ತು ಅವರ ಗ್ರಾಮಸ್ಥರು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಧು ರವರ ತವರು ಮನೆಯವರು ಗೋಳಾಡುತ್ತಾ, 1 ನೇ ಆರೋಪಿಗೆ ಮಧು ರವರನ್ನು ಮದುವೆ ಮಾಡಿಕೊಟ್ಟ ನಂತರ 4 ವರುಷಗಳ ಕಾಲ ಮಾತ್ರ ಚೆನ್ನಾಗಿ ನೋಡಿಕೊಂಡರು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಂತರದಲ್ಲಿ, 2 ನೇ ಆರೋಪಿ ಹೊನ್ನಯ್ಯನಿಗೆ ಊಟೋಪಾಚಾರ, ನೋಡಿಕೊಳ್ಳುತ್ತಿಲ್ಲವೆಂದು 1 ನೇ ಆರೋಪಿಯು ನೆಪ ಮಡಿಕೊಡು ಅವರಿಬ್ಬರೂ ಮಧು ಜೊತೆ ಜಗಳ ಮಾಡಿ, ಆಕೆಗೆ ಮಾನಸಿಕ ಕಿರುಕುಳ ನೀಡಲು ಶುರು ಮಾಡಿದ್ದರು ಎಂದರೆ ಸಾಕ್ಷಿಯು ಅದನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ನಂತರ ಸದರಿ ಆರೋಪಿತರು ಮದುವೆ ಕಾಲದಲ್ಲಿ ಕೇಳಿದಷ್ಟು ವರದಕ್ಷಿಣೆ ಕೊಟ್ಟಿಲ್ಲ, ವರದಕ್ಷಿಣೆಯಾಗಿ ಮತ್ತಷ್ಟು ಹಣ ಮತ್ತು ಒಡವೆಗಳನ್ನು ಮಾಡಿಸಿಕೊಂಡು ಬರುವಂತೆ ಮಧುರವರನ್ನು ಆಗಾಗ ತವರು ಮನೆಗೆ ಕಳುಹಿಸುತ್ತಿದ್ದು,

ಆಕೆಯ ತಾಯಿ ಮತ್ತು ತಮ್ಮ, ಚಿನ್ನದ ಉಂಗುರ ಹಾಗೂ ರೂ. 50,000/- ಗಳಷ್ಟು ಹಣವನ್ನು ಸಹ ಕೊಟ್ಟು ಕಳುಹಿಸಿದ್ದು ಇಷ್ಟಾದರೂ ಸಹ ಆರೋಪಿತರು ಮಧುರವರಿಗೆ, 1 ಲಕ್ಷ ಹಣವನ್ನು ಪಡೆದುಕೊಂಡು ಬಾ ಇಲ್ಲದಿದ್ದರೆ ನಿನ್ನನ್ನು ಹೊಡೆದು ಸಾಯಿಸುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದರು ಎಂದರೆ ಸರಿಯಲ್ಲ. ಮಧುರವರ ತಂದೆ ಮತ್ತು ತಮ್ಮ, ಆರೋಪಿತರಿಗೆ ತಿಳುವಳಿಕೆ ಹೇಳಿದರೂ ಸಹ ಅವರು ಮತ್ತಷ್ಟು ಹಣ ಮತ್ತು ಒಡವೆ ತರುವಂತೆ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು, ಮಧು ರವರಿಗ ಕಿರುಕುಳ ನೀಡಿ, ಹಣ ಪಡೆದುಕೊಂಡು ಬರದಿದ್ದರೆ ಬದುಕಿರುವುದಕ್ಕಿಂತ ಸಾಯುವುದೇ ಲೇಸು, ನೀನು ಸತ್ತು ಹೋಗು ಎಂದು ಹೇಳಿದುದನ್ನು ಆಕೆಯ ತಾಯಿ ಜೊತೆ ಹೇಳಿಕೊಂಡಿದ್ದು, ಮಧು ರವರು ಆರೋಪಿತ ಹಿಂಸೆ ಕಿರುಕುಳ ತಾಳಲಾರದೇ ಆತ್ಮಹತ್ಯೆಗೆ ಪ್ರಚೋದನೆಗೊಂಡು ನೇಣು ಹಾಕಿಕೊಂಡಳು ಎಂದು ನನಗೆ ಗೊತ್ತಾಯಿತು ಎಂದರೆ ನನಗೆ ಗೊತ್ತಿಲ್ಲ.

11. ದಿಃ 05.10.2020 ರಂದು ಪೊಲೀಸರು, ಘಟನೆಗೆ ಸಂಬಂಧಪಟ್ಟಂತೆ ಮಹಜರ್ ಗೆ ಬಂದಿದ್ದರು ಎಂದರೆ ಸಾಕ್ಷಿಯು, ಅವರು ಬಂದಿದ್ದರು, ಸಮಯ ನನಗೆ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆ ಸಮಯದಲ್ಲಿ, ನಾನು ಖುದ್ದು ಹಾಜರಿದ್ದು, ಮಧು ಆತ್ಮಹತ್ಯೆ ಮಾಡಿಕೊಂಡ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದೇನೆ ಎಂದರೆ ಸರಿ. ಆ ಪೊಲೀಸರು ಮು.ಮಾ.1 -ವೇಲ್, ಕುಡಗೋಲು ಹಾಗೂ ಚೇರನ್ನು ಅಮಾನತ್ತು ಪಡಿಸಿಕೊಂಡು ಎಂದರೆಸಾಕ್ಷಿಯು, ವೇಲ್ ಮತ್ತು ಕುಡಗೋಲನ್ನು ನೋಡಿದ್ದೇನೆ ಎಂದು ಹೇಳುತ್ತಾರೆ. ಕುಡಗೋಲನ್ನು ನಾಯಾಲಯದ ಮುಂದೆ ಹಾಜರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸದರಿ ಕುಡಗೋಲನ್ನು ಮು.ಮಾ.6 ಎಂದು ಗುರುತಿಸಲಾಯಿತು. ಅಭಿಯೋಜನೆಯು ಚೇರನ್ನು ನ್ಯಾಯಾಲಯದ ಮುಂದೆ ಹಾಜರಿಸಿದ್ದು , ಸಾಕ್ಷಿಯು ಅದನ್ನು ತಾನು ನೋಡಿಲ್ಲವೆಂದು ಹೇಳಿದ್ದರಿಂದ ಅದನ್ನು ಮುದ್ದೆ ಮಾಲಾಗಿ ಗುರುತಿಸಿಲ್ಲ.

12. ನನ್ನ ಮಾಹಿತಿ ಮೇರೆಗೆ ಪೊಲೀಸರು, ಬೆಳಿಗ್ಗೆ 8 ರಿಂದ 9.30 ಗಂಟೆ ತನಕ ಮಹಜರ್ ಮಾಡಿಕೊಂಡು, ಮುಮಾ.1, 6 ಮತ್ತು ಚೇರನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸಾಕ್ಷಿಯು, ಪೊಲೀಸರು ಮುಮಾ. 1 ಮತ್ತು 6 ನ್ನು ತೆಗೆದುಕೊಂಡರು ಎಂದು ಹೇಳುತ್ತಾರೆ.

13. ದಿಃ 05.10.2020 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ, ಆರೋಪಿತರು ಮಧುವಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿದ್ದರಿಂದ, ಆಕೆ ಪ್ರಚೋದನೆ ಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದು ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ.

14. ಸಾಕ್ಷಿಗೆ ಹೇಳಿಕೆಯ '' ಸುಮಾರು 4 ವರುಷದ ನಂತರದಲ್ಲಿ ನಿತೀಶ್ ಕುಮಾರ್ ಮನಯಲ್ಲಿ ಗಂಡ ಹೆಂಡತಿ ಇಬ್ಬರಿಗೂ ಆಗಾಗ್ಗೆ ಗಲಾಟೆ ನಡೆಯುತ್ತಿರುವ ವಿಚಾರ ತಿಳಿಯಿತು '' ಮತ್ತು '' ನಂತರ ಮಧುಮಾಲಿನಿ ಅಲಿಯಾಸ್ ಮಾಲಿನಿಯ ತವರು ಗೋಳಾಡುತ್ತಾ ಹೇಳಿದ್ದೆನೆಂದರೆ, ನಿತೀಶ್ ಕುಮಾರ್ ನಿಗೆ ನಮ್ಮ ಮಗಳು ಮಧುಮಾಲಿನಿ ಅಲಿಯಾಸ್ ಮಾಲಿನಿಯನ್ನು ಮದುವೆ ಮಾಡಿಕೊಟ್ಟ ನಂತರ ಸುಮಾರು 4 ವರುಷಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದು ನತಂರದಲ್ಲಿ ನಿತೀಶ್ ಕುಮಾರ್ ನ ತಂದೆ ಹೊನ್ನಯ್ಯ ರವರಿಗೆ ಉಟೋಪಚಾರ ನೋಡಿಕೊಳ್ಳುತ್ತಿಲ್ಲವೆಂದು ನೆಪ ಮಾಡಿ ನಿತೀಶ್ ಕುಮಾರ್ ಮತ್ತು ಹೊನ್ನಯ್ಯ ಇಬ್ಬರು ಮಧುಮಾಲಿನಿ ಜೊತೆ ಜಗಳ ಮಾಡಿ ಆಕೆಗೆ ಬೈದು ಹೊಡೆದು ಮಾನಸಿಕ ಕಿರುಕುಳ ನೀಡಲು ಶುರು ಮಾಡಿ ನಂತರದಲ್ಲಿ ಮದುವೆ ಕಾಲದಲ್ಲಿ ನಾವು ಕೇಳಿದಷ್ಟು ವರದಕ್ಷಿಣಗೆಯನ್ನು ಕೊಟ್ಟಿರುವುದಿಲ್ಲ, ವರದಕ್ಷಿಣೆಯಾಗಿ ಮತ್ತಷ್ಟು ಹಣ ಒಡವೆಗಳನ್ನು ಮಾಡಿಸಿಕೊಂಡು ಬರುವಂತೆ ಆಗಾಗ್ಗೆ ಮಧುಮಾಲಿನಿಯನ್ನು ತವರು ಮನೆಗೆ ಕಳುಹಿಸುತ್ತಿದ್ದು ಮಧುಮಾಲಿನಿಯ ತಾಯಿ ಮತ್ತು ತಮ್ಮ ಮಹದೇವಸ್ವಾಮಿ ರವರು ಚಿನ್ನದ ಉಂಗುರ ಮತ್ತು ಜೊತೆಗೆ 50,000/- ರೂ.ಗಳಷ್ಟು ಹಣವನ್ನು ಸಹ ಕೊಟ್ಟು ಕಳುಹಿಸಿದ್ದು,ಇಷ್ಟಾದರೂ ಸಹ ನಿತೀಶ್ ಕುಮಾರ್ ಮತ್ತು ಹೊನ್ನಯ್ಯ ರವರು ನಿನ್ನ ತವರು ಮನೆಯಿಂದ ಒಂದು ಲಕ್ಷ ಹಣವನ್ನು ಈಸಿಕೊಂಡು ಬಾ ಇಲ್ಲದಿದ್ದರೆ ನಿನ್ನ ಹೊಡೆದು ಸಾಯಿಸುತ್ತೇವೆಂದು ಬೆದರಿಕೆ ಹಾಕುತ್ತಿದ್ದು, ಈ ಬಗ್ಗೆ ಮಧುಮಾಲಿನಿಯ ತಂದೆ ಮತ್ತು ತಮ್ಮಂದಿರು ನಿತೀಶ್ ಕುಮಾರ್ ಮತ್ತು ಹೊನ್ನಯ್ಯ ರವರಿಗೆ ಮಧುಮಾಲಿನಿಗೆ ತೊಂದರೆ ಕೊಡದೆ ಚೆನ್ನಾಗಿ ನೋಡಿಕೊಳ್ಳುವಂತೆ ಎಷ್ಟೇ ತಿಳುವಳಿಕೆ ಹೇಳಿದರೂ ಕೂಡ ನಿತೀಶ್ ಕುಮಾರ್ ಮತ್ತು ಹೊನ್ನಯ್ಯ ರವರು ಮಧುಮಾಲಿನಿ ಗೆ ಮತ್ತಷ್ಟು ಹಣ ಮತ್ತು ಒಡವೆ ತರುವಂತೆ ಮಾನಸಿಕ – ದೈಹಿಕ ಹಿಂಸೆ ಕಿರುಕುಳ ನೀಡುತ್ತಿದ್ದು ಜೊತೆಗೆ ನೀನು ಹಣ ಈಸಿಕೊಂಡು ಬರದಿದ್ದರೆ ಬದುಕಿರುವುದಕ್ಕಿಂತ ಸಾಯುವುದೇ ಲೇಸು, ನೀನು ಸತ್ತು ಹೋಗು, ಎಂದು ಹೇಚ್ದಿನ್ನು ಮಧುಮಾಲಿನಿ, ಆಕೆಯ ತಾಯಿ ಜೊತೆ ಹೇಳಿಕೊಂಡಿದ್ದು, ಹೇಳಿದ್ದರಿಂದ ಮಧುಮಾಲಿನಿ ಯು, ನಿತೀಶ್ ಕುಮಾರ್ ಮತ್ತು ಹೊನ್ನಯ್ಯ ರವರು ನೀಡುತಿತದ್ದ ಹಿಂಸೆ ಕಿರುಕುಳ ತಾಳಲಾರದೆ ಮನನೊಂದು ಆತ್ಮಹತ್ಯೆಗೆ ಪ್ರಚೋದನೆಗೊಂಡು ತನ್ನವಾಸದ ಮನೆಯಲ್ಲಿ ವೇಲ್ ನಿಂದ ತನಗೆ ತಾನೆ ನೇಣು ಬಿಗಿದುಕೊಂಡು ಮೃತ ಪಟ್ಟಿರುವುದಾಗಿ ತಿಳಿದು ಬಂದಿರುತ್ತದೆ '' ಎಂಬ ಭಾಗವನ್ನು ಓದಿ ಹೇಳಿದ್ದು , ಸಾಕ್ಷಿಯು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.17 ಎಂದು ಗುರುತಿಸಲಾಯಿತು .

15. ಆರೋಪಿತರ ನಿರಂತರ ಕಿರುಕುಳದಿಂದ ಮಧುಮಾಲಿನಿ ನೇಣು ಹಾಕಿಕೊಂಡಿರುವುದು ನನಗೆ ತಿಳಿದಿದ್ದರೂ ಸಹ ಆರೋಪಿತರ ಕೋರಿಕೆಯ ಮೇರೆಗೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ಮತ್ತು 2 ಆರೋಪಿತರ ಪರವಾಗಿ ಶ್ರೀ ಎಂ ಎಂ ವಕೀಲರಿಂದಃ</u>**

16. ನಾನು 10 -12 ವರುಷದಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ನಾನು ಅಲ್ಲಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ. 2 ನೇ ಕೋರೋನ ಕಾಯಿಲೆ ಸಮಯದಲ್ಲಿ ಲಾಕ್ ಡೌನ್ ಇದ್ದುದರಿಂದ ನಾನು ಊರಿಗೆ ಬಂದಿದ್ದೆನು. ಪೊಲೀಸರು ತನಿಖೆಗಾಗಿ ನೋಟಿಸು ನೀಡಿಲ್ಲ. ಪೊಲೀಸರು ಮಹಜರ್ ಗೆ ಬಂದಾಗ ನನಗೆ ಗೊತ್ತಿರುವ ವಿಚಾರವನ್ನು ಹೇಳಿದ್ದೆನು. ನಾನು ವಡ್ಡರಹಳ್ಳಿ ಗ್ರಾಮದಲ್ಲಿ ವಾಸವಿದ್ದು, ವ್ಯವಸಾಯ ಮತ್ತು ಕೂಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿಲ್ಲ. ನಿಪಿ.14 ರಲ್ಲಿ ಇರುವ ನನ್ನ ಸಹಿಯನ್ನು, ನಾನು ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುಮಾ.1 ಮತ್ತು 6 ನ್ನು ಪೊಲೀಸರು ನನ್ನ ಸಮಕ್ಷಮದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ, ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.